# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.02 | Issue. 214 | Pages. 2 | Date: 04-08-2026, TUESDAY RNI NO: KARKAN/2024/89601 Kannada Daily

ಸಂಪುಟ : 02 - ಸಂಚಿಕೆ : 214 - ಪುಟಗಳು : 2 04-08-2026 ಮಂಗಳವಾರ Ph: 8762954248 ದರ : ₹1


# ಶಿವಲಿಂಗೇಗೌಡರಿಗೆ ಒಲಿದ ಸಚಿವ ಸ್ಥಾನ

## ಕಾಂಗ್ರೆಸ್‌ನಲ್ಲಿ ಖುಲಾಯಿಸಿದ ಅದೃಷ್ಟ | ಅರಸೀಕೆರೆ ಕ್ಷೇತ್ರದ ಮೊದಲ ಸಚಿವರೆಂಬ ಹಿರಿಮೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ಅರಸೀಕೆರೆ ಕ್ಷೇತ್ರದ ಶಾಸಕ ಕೆ.ಎಂ. ಶಿವಲಿಂಗೇಗೌಡರಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸರ್ಕಾರದಲ್ಲಿ ಸಚಿವ ಸ್ಥಾನ ಸಿಕ್ಕಿದ್ದು ಅವರ ನಿರಂತರ ಪ್ರಯತ್ನಕ್ಕೆ ಕೊನೆಗೂ ಫಲ ಸಿಕ್ಕಿದೆ.

ಬಿ. ಶಿವರಾಂ, ಎಚ್.ಡಿ. ರೇವಣ್ಣ ಹಾಗೂ ಎ. ಮಂಜು ಅವರ ನಂತರ ಕೆ.ಎಂ. ಶಿವಲಿಂಗೇಗೌಡರು ಜಿಲ್ಲೆಯ ಉಸ್ತುವಾರಿ ಸಚಿವರಾಗಿ ಕಾರ್ಯನಿರ್ವಹಿಸಲಿದ್ದಾರೆ. ಈ ಕುರಿತು ಪ್ರತಿಕ್ರಿಯೆ ಹಂಚಿಕೊಂಡಿರುವ ಸಂಸದ ಶ್ರೇಯಸ್ ಪಟೇಲ್, ನೂತನ ಸಚಿವರಾಗಿ ಅಧಿಕಾರದ ವಹಿಸಿಕೊಳ್ಳಲಿರುವ ಹಿರಿಯ ರಾಜಕಾರಣಿ ಕೆ.ಎಂ. ಶಿವಲಿಂಗೇಗೌಡರನ್ನು ಅವರ ನಿವಾಸದಲ್ಲಿ ಭೇಟಿ ನೀಡಿ ಹೃತ್ಪೂರ್ವಕ ಅಭಿನಂದನೆ ಸಲ್ಲಿಸಿ, ಸಿಹಿ ಹಂಚುವ ಮೂಲಕ ಸಂಭ್ರಮಿಸಿದೆನು ಎಂದು ತಿಳಿಸಿದ್ದಾರೆ.

ಸಾಮಾನ್ಯ ಜನರ ಬದುಕಿನ ನೋವು-ನಲಿವುಗಳನ್ನು ಅರಿತು, ಸದಾ ಜನಪರ ಆಡಳಿತಕ್ಕೆ ಬದ್ಧರಾಗಿರುವ ಅವರ ಅನುಭವ, ಸರಳತೆ ಮತ್ತು ಜನಸೇವೆಯ ಸಂಕಲ್ಪವು ಸಚಿವರಾಗಿ ಇನ್ನಷ್ಟು ಪರಿಣಾಮಕಾರಿಯಾಗಿ ರಾಜ್ಯದ ಅಭಿವೃದ್ಧಿಗೆ ದಾರಿದೀಪವಾಗಲಿ ಎಂಬುದು ನಮ್ಮೆಲ್ಲರ ಆಶಯ ಎಂದು ತಿಳಿಸಿದ್ದಾರೆ.

ಭಗವಂತನು ಅವರಿಗೆ ಆಯುರಾರೋಗ್ಯ, ಅಪಾರ ಶಕ್ತಿ ಹಾಗೂ ಜನಸೇವೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡುವ ಸಾಮರ್ಥ್ಯವನ್ನು ಕರುಣಿಸಲಿ. ಅವರ ನಾಯಕತ್ವದಲ್ಲಿ ರಾಜ್ಯವು ಅಭಿವೃದ್ಧಿಯ ಹೊಸ ಶಿಖರಗಳನ್ನು ತಲುಪಿ, ಪ್ರತಿಯೊಬ್ಬರ ಬದುಕಿನಲ್ಲಿ ಸುಖ-ಸಮೃದ್ಧಿ ನೆಲೆಸಲಿ ಹಾರೈಸುವುದಾಗಿ ಹೇಳಿದ್ದಾರೆ.



### ಕೆ.ಎಂ. ಶಿವಲಿಂಗೇಗೌಡರ ವಿವರ

ಪೂರ್ಣ ಹೆಸರು: ಶಿವಲಿಂಗೇಗೌಡ ಕೆ.ಎಂ.
ಕ್ಷೇತ್ರ: ಅರಸೀಕೆರೆ
ಜನ್ಮ ದಿನಾಂಕ: 14 ಫೆಬ್ರುವರಿ 1958 (ವಯಸ್ಸು 68)
ಹುಟ್ಟಿದ ಸ್ಥಳ: ಕುಡುಕುಂದಿ, ಅರಸೀಕೆರೆ
ವಿದ್ಯಾರ್ಹತೆ: ಬಿ.ಎ.
ಉದ್ಯೋಗ: ಕೃಷಿ
ತಂದೆ ಹೆಸರು: ಮಂಜೇಗೌಡ
ತಾಯಿ ಹೆಸರು: ದ್ಯಾವಮ್ಮ
ಪತ್ನಿ: ಎಚ್.ಡಿ. ಪುಷ್ಪವತಿ
ಮಕ್ಕಳು: 1 ಪುತ್ರ, 2 ಪುತ್ರಿಯರು
ಧರ್ಮ: ಹಿಂದು
ಜಾತಿ: ಒಕ್ಕಲಿಗ

### ರಾಜಕೀಯ ಜೀವನ

2001 ರಿಂದ 2006 ರವರೆಗೆ ಗಂಡಸಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಸದಸ್ಯ, ನಾಲ್ಕು ಬಾರಿ ಶಾಸಕ. 2008: 74,025 ಮತಗಳನ್ನು ಪಡೆದು ಜಯ (ಜೆಡಿಎಸ್), 2013: 76,579 ಮತಗಳನ್ನು ಪಡೆದು ಜಯ (ಜೆಡಿಎಸ್), 2018: 93,986 ಮತಗಳನ್ನು ಪಡೆದು ಗೆಲುವು (ಜೆಡಿಎಸ್), 2023: 98,375 ಮತ ಪಡೆದು ಜಯ (ಕಾಂಗ್ರೆಸ್).

### ಕಾಂಗ್ರೆಸ್ ಕಾರ್ಯಕರ್ತರ ಸಂಭ್ರಮಾಚರಣೆ

ಅರಸೀಕೆರೆ: ಕೆ.ಎಂ.ಶಿವಲಿಂಗೇಗೌಡ ಅವರು ಸಚಿವರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಸೋಮವಾರ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಾಚರಿಸಿದರು.

ನಗರದ ಪಿಪಿ ವೃತ್ತದಲ್ಲಿ ಜಮಾಯಿಸಿದ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಸತತ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಶಿವಲಿಂಗೇಗೌಡರಿಗೆ ಸಚಿವ ಸ್ಥಾನ ಸಿಕ್ಕಿರುವುದು ಖುಷಿ ತಂದಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಪರ ಘೋಷಣೆ ಮೊಳಗಿಸಿದರು.

ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಪ್ರಾರ್ಥಿಸಿ ಪಕ್ಷದ ಕಾರ್ಯಕರ್ತರು ಹಾಗೂ ಬೆಂಬಲಿಗರು ವಿವಿಧ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸಿದ್ದರು. ಕಾಂಗ್ರೆಸ್ ವರಿಷ್ಠರು ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲೂ ಶಿವಲಿಂಗೇಗೌಡರ ಪರ ವಕಾಲತ್ತು ವಹಿಸುತ್ತಿದ್ದರು.

# ಆಧುನಿಕ ದಿನಗಳಲ್ಲಿ ಮೌಲ್ಯಗಳ ಕುಸಿತ ಆತಂಕಕಾರಿ ಬೆಳವಣಿಗೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಪ್ರಸ್ತುತ ದಿನಗಳಲ್ಲಿ ಸಾಮಾಜಿಕ ಮೌಲ್ಯಗಳು ಕುಸಿತ ಕಂಡಿದ್ದು, ಕೇವಲ ಭ್ರಷ್ಟಾಚಾರ ಸ್ವಜನ ಪಕ್ಷಪಾತ, ಜಾತೀಯತೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದು ನಾಗರಿಕ ಸಮಾಜದ ಲಕ್ಷಣವಲ್ಲವೆಂದು ಹಾಸನದ ಸರ್ಕಾರಿ ಕಲಾ, ವಾಣಿಜ್ಯ ಸ್ನಾತಕೋತ್ತರ ಕಾಲೇಜಿನ ಸಮಾಜಶಾಸ್ತ್ರ ಸ್ನಾತಕೋತ್ತರ ವಿಭಾಗದ ಉಪನ್ಯಾಸಕ ಡಾ. ಶಶಿಕುಮಾರ್ ಹೇಳಿದರು.

ತಾಲ್ಲೂಕಿನ ಇಬ್ಬೀಡು ಗ್ರಾಮದಲ್ಲಿ ಏರ್ಪಡಿಸಿದ್ದ ನಿವೃತ್ತ ಯೋಧ ಐ.ಎಲ್.ವೆಂಕಟರಮಣ ಅವರಿಗೆ ಅವರ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ, ದೇಶದ ಗಡಿಯನ್ನು ಕಾಯುತ್ತಾ ನಮ್ಮೆಲ್ಲರ ರಕ್ಷಣೆಗಾಗಿ ತಮ್ಮ ಜೀವನದ ಅಮೂಲ್ಯ ವರ್ಷಗಳನ್ನು ಸಮರ್ಪಿಸಿದ ವೀರಯೋಧರನ್ನು ಗೌರವಿಸುವುದು ಎಲ್ಲರ ಆದ್ಯ ಕರ್ತವ್ಯ. ಸೈನಿಕರ ಜೀವನ ಸಾಮಾನ್ಯವಾದುದಲ್ಲ. ನಾವು ನಮ್ಮ ಮನೆಗಳಲ್ಲಿ ಕುಟುಂಬದವರೊಂದಿಗೆ ನೆಮ್ಮದಿಯಿಂದ ಬದುಕುತ್ತಿರುವಾಗ, ನಮ್ಮ ಸೈನಿಕರು ಹಿಮಾಲಯದ ಕೊರೆಯುವ ಚಳಿಯಲ್ಲೂ, ಮರುಭೂಮಿಯ ಉರಿಯುವ ಬಿಸಿಲು, ಕಠಿಣ ಪರಿಸ್ಥಿತಿಗಳಲ್ಲೂ ದೇಶದ ಗಡಿಯನ್ನು ಕಾಯುತ್ತಾ ಅವರ ಕರ್ತವ್ಯ ನಿಷ್ಠೆ, ಶಿಸ್ತು, ಧೈರ್ಯ ತ್ಯಾಗಕ್ಕೆ ನಾವು ಎಂದಿಗೂ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದರು.



ಈ ಪವಿತ್ರ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಿ ಸೇವೆಯಿಂದ ನಿವೃತ್ತರಾಗಿರುವ ಗೌರವಾನ್ವಿತ ವೆಂಕಟರಮಣ ಮತ್ತು ಅವರ ಪತ್ನಿಯನ್ನು ಅಭಿನಂದಿಸುತ್ತಿರುವುದು ಇಡೀ ಯೋಧರಿಗೆ ಸಲ್ಲಿಸುವ ಗೌರವವಾಗಿದೆ. ಇಂತಹ ಸಂಸ್ಕಾರ ಮರೆಯಾಗಿ ಎಲ್ಲಾ ಕ್ಷೇತ್ರಗಳಲ್ಲಿಯೂ ಕೇವಲ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಜಾತೀಯತೆ ರಾರಾಜಿಸುತ್ತಿದ್ದು ಸಾಮಾಜಿಕ ಮೌಲ್ಯಗಳಾದ ಪ್ರೀತಿ, ವಿಶ್ವಾಸ, ಪ್ರಾಮಾಣಿಕತೆ, ಶಿಸ್ತು, ಸಮಯ ಪಾಲನೆ, ಪರಸ್ಪರ ಗೌರವದಂತಹ ಸಾಮಾಜಿಕ ಮೌಲ್ಯಗಳು ಕಣ್ಮರೆಯಾಗಿ ಭ್ರಷ್ಟರು, ದೇಶದ್ರೋಹಿಗಳು, ಅತ್ಯಾಚಾರಿಗಳು, ಸಮಾಜ ವಿರೋಧಿ ಕೃತ್ಯಗಳನ್ನು ಮಾಡುವವರು ಸಮಾಜದಲ್ಲಿ ರಾರಾಜಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ನಾಗರಿಕ ಸಮಾಜದ ಲಕ್ಷಣವಲ್ಲ.

ಅದನ್ನು ತಡೆಯದಿದ್ದರೆ ಮುಂದಿನ ಪೀಳಿಗೆಗೆ ಅಪಾಯಕಾರಿ ಸಮಾಜವನ್ನು ಕಟ್ಟಿ ಬಿಟ್ಟು ಹೋದಂತಾಗುತ್ತದೆ ಎಂದರು.

ಸಮಾಜದಲ್ಲಿ ತಮ್ಮ ಜೀವದ ಹಂಗನ್ನು ತೊರೆದು ನಮ್ಮನ್ನು ರಕ್ಷಿಸುತ್ತಿರುವ ಇಂತಹ ವೀರ ಯೋಧರಿಗೆ ಇಂತಹ ಅಭಿನಂದನಾ ಸಮಾರಂಭಗಳನ್ನು ಏರ್ಪಡಿಸುವ ಮೂಲಕ ಅವರಿಗೆ ಗೌರವ ಸೂಚಿಸಿದರೆ ಆ ಗೌರವ ಅವರೊಬ್ಬರಿಗೆ ಮಾತ್ರವಲ್ಲ. ಇಡೀ ಭಾರತೀಯ ಸೈನಿಕರಿಗೆ ಸಲ್ಲಿಸುವ ಗೌರವವಾಗಿದ್ದು ಯುವಕರು ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ದೇಶ ಸೇವೆಗೆ ಮುಂದಾಗುವಂತಹ ಯುವಕರನ್ನು ಈ ಮೂಲಕ ಆಕರ್ಷಿಸುವಂತೆ ಕರೆ ನೀಡಿದರು.

ಕಾರ್ಯಕ್ರಮವನ್ನು ಶತಾಯುಷಿ ಸಾಕಮ್ಮ ವೀರಭದ್ರಯ್ಯ ಉದ್ಘಾಟಿಸಿದರು. ಹಾಸನದ ನಿವೃತ್ತ ಯೋಧರ ಸಂಘದ ಪದಾಧಿಕಾರಿಗಳು, ಗ್ರಾಮಸ್ಥರು ಹಾಜರಿದ್ದರು.

# ಆ.7ಕ್ಕೆ ಹಾಸನದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ಕಾರ್ಯಾಗಾರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಭಾರತೀಯ ವಿದ್ಯಾರ್ಥಿ ಸಂಘದಿಂದ ಸ್ಪರ್ಧಾತ್ಮಕ ಪರೀಕ್ಷೆ ತಯಾರಿ ಕುರಿತು ಆ.7ರ ಬೆಳಿಗ್ಗೆ 10.30ಕ್ಕೆ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಒಂದು ದಿನದ ಉಚಿತ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಬಿವಿಎಸ್ ಜಿಲ್ಲಾ ಸಂಯೋಜಕ ಡಾ. ಶಶಿಧರ್ ಮೌರ್ಯ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ರಾಜ್ಯ ಸರ್ಕಾರ ಇತ್ತೀಚೆಗೆ ಸುಮಾರು 70 ಸಾವಿರ ಹುದ್ದೆ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಐಎಎಸ್, ಕೆಎಎಸ್, ಐಪಿಎಸ್, ಪಿಎಸ್ಐ, ಎಸ್‌ಡಿಎ, ಎಫ್‌ಡಿಎ, ಪಿಡಿಒ, ವಿಎ ಸೇರಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿರುವ ಅಭ್ಯರ್ಥಿಗಳಿಗೆ ಮಾರ್ಗದರ್ಶನ ನೀಡುವುದು ಕಾರ್ಯಾಗಾರದ ಉದ್ದೇಶವೆಂದರು.

ಕನ್ನಡ ಐಚ್ಛಿಕ ವಿಷಯದಲ್ಲಿ ಖ್ಯಾತಿ ಪಡೆದಿರುವ ಬೆಂಗಳೂರು ಅಕ್ಕ ಐಎಎಸ್ ಅಕಾಡೆಮಿಯ ಡಾ.ಶಿವಕುಮಾರ್ ಅವರು ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ, ಅಧ್ಯಯನ ವಿಧಾನ, ಸಮಯ ನಿರ್ವಹಣೆ ಹಾಗೂ ಯಶಸ್ಸಿನ ಸೂತ್ರಗಳ ಕುರಿತು ಮಾರ್ಗದರ್ಶನ ನೀಡಲಿದ್ದಾರೆ. ಮೈಸೂರು ಮಹಾರಾಣಿ ಕಾಲೇಜಿನ ಪ್ರಾಧ್ಯಾಪಕ ಪ್ರೊ.ಲಕ್ಷ್ಮಣ, ವಾಣಿಜ್ಯ ತೆರಿಗೆ ಇಲಾಖೆಯ ಉಪ ಆಯುಕ್ತ ಎನ್.ಆರ್.ಜಯರಾಂ, ಸಹಾಯಕ ಆಯುಕ್ತ ಚನ್ನಕೇಶವ ಸಹ ಪರೀಕ್ಷಾರ್ಥಿಗಳಿಗೆ ಸಲಹೆ ನೀಡಲಿದ್ದಾರೆಂದರು.




ಪತ್ರಕರ್ತ ನಾಗರಾಜ್ ಹೆತ್ತೂರು ಮಾತನಾಡಿ, ಜಿಲ್ಲಾಧಿಕಾರಿ ಅವರ ಸಲಹೆ ಮೇರೆಗೆ ವಿದ್ಯಾರ್ಥಿಗಳಿಗೆ ಅನುಕೂಲ ಆಗಲಿ ಎಂಬ ಉದ್ದೇಶದಿಂದ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವುದು ಹೇಗೆ, ಪೂರ್ವ ಸಿದ್ಧತೆ ಮಾಡಬೇಕು ಎಂಬಿತ್ಯಾದಿ ಮಾರ್ಗದರ್ಶನ ಸಿಗಲಿದೆ ಎಂದರು.

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಉದ್ಘಾಟನೆ ನೆರವೇರಿಸಲಿದ್ದು, ನಿವೃತ್ತ ಪ್ರಾಂಶುಪಾಲ ಡಾ.ಅತ್ನಿ ಕೃಷ್ಣಯ್ಯ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತ ಸಂವಿಧಾನ ಪೀಠಿಕೆ ಮತ್ತು ಹಿತ ನುಡಿ ಆಡುವರು.

ಮುಖ್ಯ ಅತಿಥಿಗಳಾಗಿ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಪಿ.ದೂದ್‌ಪೀರ್, ತಾಲ್ಲೂಕು ಸಹಾಯಕ ನಿರ್ದೇಶಕ ಮನುಕುಮಾರ್, ಜಿಲ್ಲಾ ವಕೀಲರ ಸಂಘದ ಮಾಜಿ ಉಪಾಧ್ಯಕ್ಷ ಯೋಗೀಶ್ ಹುಲಿಕೆರೆ, ಬಿವಿಎಸ್ ಹಿರಿಯ ಪೋಷಕ ಯೋಗೀಶ್ ಮಲ್ಲೇದೇವರಪುರ ಆಗಮಿಸುವರು. ಜಿಲ್ಲೆಯ ಎಲ್ಲ ವಿದ್ಯಾರ್ಥಿಗಳು ಇದರ ಸದುಯೋಗ ಪಡೆದುಕೊಳ್ಳುವಂತೆ ಮನವಿ ಮಾಡಿದರು. ಹೆಚ್ಚಿನ ಮಾಹಿತಿಗಾಗಿ 9972698192 ನಂಬರ್ ಸಂಪರ್ಕಿಸುವಂತೆ ಕೋರಿದರು.

ಸುದ್ದಿಗೋಷ್ಠಿಯಲ್ಲಿ ಬಿವಿಎಸ್ ಜಿಲ್ಲಾ ಮುಖಂಡ ರಾಮು ನರಸಿನಕುಪ್ಪೆ, ದಲಿತ ವಿಮೋಚನಾ ಮಾನವ ಹಕ್ಕುಗಳ ಆರ್. ಮರಿಜೋಸೆಫ್, ಪದ್ಮರಾಜ್, ಮಂಜು ಬಾಗನಹಳ್ಳಿ, ಪತ್ರಕರ್ತ ವೆಂಕಟೇಶ್ ಬ್ಯಾಕರವಳ್ಳಿ ಇದ್ದರು.

# ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರ



ಹಾಸನ: ತಾಲ್ಲೂಕಿನ ಕಾರೆಕೆರೆ ಕೃಷಿ ಮಹಾವಿದ್ಯಾಲಯದ ಬಿಎಸ್ಸಿ (ಕೃಷಿ) ಅಂತಿಮ ವರ್ಷದ ವಿದ್ಯಾರ್ಥಿಗಳು ದೊಡ್ಡಮತಿಘಟ್ಟ ಗ್ರಾಮದಲ್ಲಿ ಹಮ್ಮಿಕೊಂಡಿರುವ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದಲ್ಲಿ ರಾಸಾಯನಿಕ ಸಿಂಪಡಣೆಯ ವೇಳೆ ಸುರಕ್ಷತಾ ಕ್ರಮಗಳು ಎಂಬ ವಿಷಯದ ಕುರಿತು ಜಾಗೃತಿ ಮೂಡಿಸಲಾಯಿತು.

ವಿದ್ಯಾರ್ಥಿಗಳು ವೈಯಕ್ತಿಕ ಸುರಕ್ಷತಾ ಸಾಧನಗಳಾದ ಕೈಗವಸು, ಮಾಸ್ಕ್, ಮುಖ ರಕ್ಷಣಾ ಕವಚ, ಬೂಟು ಹಾಗೂ ಪೂರ್ಣ ತೋಳಿನ ಉಡುಪುಗಳ ಮಹತ್ವವನ್ನು ಪ್ರಾತ್ಯಕ್ಷಿಕೆ ಮೂಲಕ ವಿದ್ಯಾರ್ಥಿಗಳು ತಿಳಿಸಿಕೊಟ್ಟರು.

ಔಷಧಿ ಮಿಶ್ರಣದ ಸರಿಯಾದ ವಿಧಾನ, ಸಿಂಪಡಣಾ ಯಂತ್ರದ ಬಳಕೆ, ಗಾಳಿಯ ದಿಕ್ಕಿನಲ್ಲಿ ಸಿಂಪಡಣೆ ಮಾಡುವ ಅಗತ್ಯ ಹಾಗೂ ಸಿಂಪಡಣೆ ನಂತರ ಕೈ ಮತ್ತು ಉಪಕರಣಗಳನ್ನು ಸ್ವಚ್ಛಗೊಳಿಸುವ ಕ್ರಮಗಳನ್ನು ಪ್ರದರ್ಶಿಸಲಾಯಿತು. ಜೊತೆಗೆ ತಪ್ಪು ಮತ್ತು ಸರಿಯಾದ ಸಿಂಪಡಣೆಯ ವಿಧಾನವನ್ನು ನಾಟಕದ ರೂಪದಲ್ಲಿ ಪ್ರದರ್ಶಿಸಿ ರೈತರಿಂದಲೇ ತಪ್ಪುಗಳನ್ನು ಗುರುತಿಸುವಂತೆ ಮಾಡಿ ಜಾಗೃತಿ ಮೂಡಿಸಲಾಯಿತು.

# ಜನಸಾಮಾನ್ಯರಿಗೆ ರೋಟರಿ ತುಂಬಾ ಹತ್ತಿರ

## ರೋಟರಿ ಜಿಲ್ಲಾ ಗವರ್ನರ್ ಲಿವಿಸ್ ಅಭಿಮತ | ಪದಾಧಿಕಾರಿಗಳ ಪದಗ್ರಹಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರೋಟರಿ ಸಂಸ್ಥೆಗಳು ಸಮಾಜಮುಖಿ ಕಾರ್ಯಗಳಲ್ಲಿ ತೊಡಗುವ ಮೂಲಕ ಜನ ಸಾಮಾನ್ಯರಿಗೆ ನೆರವಾಗುತ್ತಿವೆ ಎಂದು ರೋಟರಿ-3182ರ 2028-29ನೇ ಸಾಲಿನ ಜಿಲ್ಲಾ ಗವರ್ನರ್ ಅಲೆನ್ ವಿನಯ್ ಲಿವಿಸ್ ಹೇಳಿದರು.

ನಗರ ಹೊರವಲಯದ ನಂದ ಗೋಕುಲ ಸಮುದಾಯ ಭವನದಲ್ಲಿ ಈಚೆಗೆ ರೋಟರಿ ಕ್ಲಬ್ ಹಾಸನ ರಾಯಲ್ ಸಂಸ್ಥೆಯಿಂದ ನಡೆದ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಮಾತನಾಡಿ, ರೋಟರಿ ಸಂಸ್ಥೆಯು ಸಮಾಜದಲ್ಲಿನ ಅನೇಕ ಹೋರಾಟಗಳಲ್ಲಿ ಭಾಗಿಯಾಗಿ ಸಮಾಜದ ಬದಲಾವಣೆಗಾಗಿ ದುಡಿಯುತ್ತಿದ್ದು, ಅದರಲ್ಲೂ ರೋಟರಿ ಸಂಸ್ಥೆ ಸಾಮಾಜಿಕವಾಗಿ ಅನೇಕ ಉತ್ತಮ ಕೆಲಸ ಮಾಡಿದೆ. ಸಮಾಜದಲ್ಲಿನ ಹಲವು ಸಮಸ್ಯೆಗಳಿಗೆ ಧ್ವನಿಯಾಗಿ ರೋಟರಿ ಸಂಸ್ಥೆ ಕೆಲಸ ಮಾಡಬೇಕು. ಸಂಸ್ಥೆಯು ಹಲವು ವರ್ಷಗಳಿಂದ ಸಮಾಜಮುಖಿ ಕೆಲಸಗಳನ್ನು ಮಾಡಿಕೊಂಡು ಬಂದಿದೆ. ದೇಶ ಹಾಗೂ ಪ್ರಪಂಚದಲ್ಲಿ ಹಲವು ಸಮಸ್ಯೆಗಳು ಎದುರಾದ ವೇಳೆ ರೋಟರಿ ಸಂಸ್ಥೆ ತನ್ನ ಕೈಲಾದ ಕೆಲಸಗಳನ್ನು ಮಾಡಿಕೊಂಡು ಬಂದಿದೆ. ರೋಟರಿ ಸಂಸ್ಥೆ ಜಿಲ್ಲೆಯಲ್ಲಿ ಉತ್ತಮ ಕೆಲಸ ಮಾಡುತ್ತಿದೆ ಎಂದರು.




ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಎಂ.ಸಿ.ರಂಗಸ್ವಾಮಿ ಮಾತನಾಡಿ, ಯಾವುದೇ ಜಾತಿ ಹಾಗೂ ರಾಜಕೀಯವಿಲ್ಲದ ಸಂಸ್ಥೆ ರೋಟರಿ. ಸೇವೆಗೆ ಮತ್ತೊಂದು ಹೆಸರೇ ರೋಟರಿ ಎಂಬುದು ಜನರ ಮಾತಾಗಿದೆ. ಅಷ್ಟರ ಮಟ್ಟಿಗೆ ಈ ಸಂಸ್ಥೆ ಇಂದು ಬೆಳೆದು ನಿಂತಿದೆ. ರೈತರಿಗೆ, ಬಡ ಶಾಲಾ ಮಕ್ಕಳಿಗೆ, ರೈತ ಮಹಿಳೆಯರಿಗೆ, ಆರ್ಥಿಕ ದುರ್ಬಲರಿಗೆ ಹಲವು ವರ್ಷಗಳಿಂದ ಸಹಾಯ ಮಾಡಿಕೊಂಡು ಬಂದಿದೆ. ಮುಂದಿನ ದಿನಗಳಲ್ಲಿ ಸಂಸ್ಥೆ ಮತ್ತಷ್ಟು ಸಾಮಾಜಿಕ ಕೆಲಸ ಕಾರ್ಯಗಳನ್ನು ಮಾಡುವುದರ ಜೊತೆಗೆ ದುರ್ಬಲ ಸರ್ಕಾರಿ ಶಾಲೆಗಳಿಗೆ ಸಹಾಯ ಮಾಡುವುದರೊಂದಿಗೆ ಮತ್ತಷ್ಟು ಬೆಳೆಯಲಿ ಎಂದು ಶುಭ ಹಾರೈಸಿದರು.

ರೋಟರಿ-3182ರ ವಲಯ 9ರ ಸಹಾಯಕ ಗವರ್ನರ್ ಎ.ಮಂಜುನಾಥ್ ಮಾತನಾಡಿ, ರೋಟರಿ ಸಂಸ್ಥೆ ಜಿಲ್ಲೆಯಲ್ಲಿ ಉತ್ತಮವಾಗಿ ಕೆಲಸ ಮಾಡಿಕೊಂಡು ಬಂದಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಕೆಲಸ ಮಾಡಿಕೊಂಡು ಸಾಗಲಿ. ಸಮಾಜದಲ್ಲಿನ ಇನ್ನು ಹಲವು ಸಮಸ್ಯೆಗಳಿಗೆ ಧ್ವನಿಯಾಗಿ ರೋಟರಿ ಸಂಸ್ಥೆಗೆ ಕೆಲಸ ಮಾಡಬೇಕು ಎಂದರು.

ನೂತನ ಅಧ್ಯಕ್ಷ ಹೆಚ್.ಕೆ.ದಿಲೀಪ್ ಕುಮಾರ್ ಮಾತನಾಡಿ, ತಮ್ಮ ಸೇವಾ ಅವಧಿಯಲ್ಲಿ ಸಾಮಾಜಿಕ ಕಾರ್ಯ ಚಟುವಟಿಕೆಗಳಲ್ಲಿ ಹೆಚ್ಚಿನ ಆದ್ಯತೆ ನೀಡುವ ಮೂಲಕ ಬಡವರು, ಬಡ ಮಕ್ಕಳಿಗೆ ಉತ್ತಮ ಯೋಜನೆಗಳನ್ನು ತಲುಪಿಸುವ ಕೆಲಸ ಮಾಡಲಾಗುವುದು. ರೋಟರಿ ರಾಯಲ್ಸ್ ಸಂಸ್ಥೆ ಕಳೆದ ಹಲವು ವರ್ಷಗಳಿಂದ ಉತ್ತಮ ಕೆಲಸ ಮಾಡಿಕೊಂಡು ಬಂದಿದ್ದು, ಮುಂದಿನ ದಿನಗಳಲ್ಲಿ ನೂತನ ಸದಸ್ಯರ ಸಹಕಾರದಿಂದ ಮತ್ತಷ್ಟು ಹೊಸ ಹೊಸ ಕಾರ್ಯಕ್ರಮಗಳನ್ನು ಮಾಡಲಾಗುವುದು. ಸಂಸ್ಥೆಗೆ ಹೊಸ ಸದಸ್ಯರು ಸೇರ್ಪಡೆಯಾಗಿದ್ದು, ಸಂಸ್ಥೆಗೆ ಮತ್ತಷ್ಟು ಬಲ ಬಂದಂತಾಗಿದೆ ಎಂದು ತಿಳಿಸಿದರು.

ನಿಕಟಪೂರ್ವ ಅಧ್ಯಕ್ಷ ಬಿ.ಕೆ.ಗಂಗಾಧರ್ ಅವರು ನೂತನ ಅಧ್ಯಕ್ಷ ದಿಲೀಪ್ ಅವರಿಗೆ ಅಧಿಕಾರ ಹಸ್ತಾಂತರಿಸಿದರು.

# ಗ್ರಾ.ಪಂ. ನೌಕರರ ಕನಿಷ್ಟ ವೇತನ ಜಾರಿಗೆ ಸಿಐಟಿಯು ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಗ್ರಾಮ ಪಂಚಾಯಿತಿ ನೌಕರರಿಗೆ ಕನಿಷ್ಟ ವೇತನ ಜಾರಿಗೊಳಿಸುವ ವಿಚಾರದಲ್ಲಿ ಸರ್ಕಾರ ಸಚಿವ ಸಂಪುಟ ಒಪ್ಪಿಗೆ ಹಾಗೂ ಹಣಕಾಸು ಇಲಾಖೆಯ ಅನುಮೋದನೆ ಸಿಕ್ಕಿಲ್ಲವೆಂಬ ನೆಪ ಹೇಳುತ್ತಿದ್ದು, ಈ ವಿಳಂಬವನ್ನು ತಕ್ಷಣ ಕೊನೆಗೊಳಿಸಿ ನೌಕರರಿಗೆ ವೇತನ ನೀಡಬೇಕೆಂದರು ಸಿಐಟಿಯು ರಾಜ್ಯ ಉಪಾಧ್ಯಕ್ಷ ರಾಮಕೃಷ್ಣ ಆಗ್ರಹಿಸಿದರು.

ಶ್ರವಣಬೆಳಗೊಳ ಗ್ರಾಮ ಪಂಚಾಯಿತಿ ಆವರಣದಲ್ಲಿ ಕರ್ನಾಟಕ ಗ್ರಾಮ ಪಂಚಾಯಿತಿ ನೌಕರರ ಸಂಘ ಹಾಗು ಸಿಐಟಿಯು ವತಿಯಿಂದ ನಡೆದ ಗ್ರಾಮ ಪಂಚಾಯಿತಿ ನೌಕರರ ಸಮಾವೇಶ ಉದ್ಘಾಟಿಸಿ ಮಾತನಾಡಿದರು.

ರಾಜ್ಯಪಾಲರು ಈಗಾಗಲೇ ಸಹಿ ಹಾಕಿದ್ದರೂ, ಸಚಿವ ಸಂಪುಟ ಹಾಗೂ ಹಣಕಾಸು ಇಲಾಖೆಯ ಅನುಮೋದನೆ ನೆಪವೊಡ್ಡಿ ಸರ್ಕಾರ ಆದೇಶ ಜಾರಿಗೊಳಿಸಲು ವಿಳಂಬ ಮಾಡುತ್ತಿದೆ. ಗ್ರಾಮ ಪಂಚಾಯಿತಿಗಳಲ್ಲಿ ದುಡಿಯುತ್ತಿರುವ ಸಾವಿರಾರು ನೌಕರರಿಗೆ ನ್ಯಾಯ ದೊರಕಿಸುವ



ಹೊಣೆಗಾರಿಕೆ ಸರ್ಕಾರದ ಮೇಲಿದೆ ಎಂದರು.

ಗ್ರಾಮ ಪಂಚಾಯಿತಿ ನೌಕರರು ಗ್ರಾಮೀಣ ಜನರಿಗೆ ಅಗತ್ಯ ಸೇವೆಗಳನ್ನು ನಿರಂತರವಾಗಿ ಒದಗಿಸುತ್ತಿದ್ದರೂ, ಅವರಿಗೆ ಸಮರ್ಪಕ ವೇತನ ಮತ್ತು ಸೇವಾ ಭದ್ರತೆ ದೊರೆಯುತ್ತಿಲ್ಲ. ನೌಕರರು ತಮ್ಮ ಹಕ್ಕುಗಳ ರಕ್ಷಣೆಗಾಗಿ ಸಂಘಟಿತರಾಗಬೇಕು. ಬಲಿಷ್ಟ ಸಂಘಟನೆ ಇದ್ದಾಗ ಮಾತ್ರ ಹಕ್ಕುಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬ ಸದಸ್ಯರೂ ಸಂಘಟನೆಯ ಬಗ್ಗೆ ಜಾಗೃತಿಯಿಂದ, ಶಿಸ್ತುಬದ್ಧವಾಗಿ ಕಾರ್ಯನಿರ್ವಹಿಸಿ ಸಂಘಟನೆ ಬಲಪಡಿಸಬೇಕೆಂದರು.

ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ಮಾತನಾಡಿ, ಗ್ರಾಮ ಪಂಚಾಯಿತಿ ನೌಕರರು ಗ್ರಾಮೀಣಾಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದು, ಅವರಿಗೆ ನ್ಯಾಯಸಮ್ಮತ ವೇತನ ಹಾಗೂ ಸೇವಾ ಭದ್ರತೆ ದೊರೆಯಬೇಕು. ನೌಕರರು ತಮ್ಮ ಹಕ್ಕುಗಳನ್ನು ಪಡೆಯಲು ಸಂಘಟಿತರಾಗಬೇಕು. ಸರ್ಕಾರದ ಗಮನ ಸೆಳೆಯಲು ಹೋರಾಟಗಳಿಗೆ ಬೆಂಬಲ ನೀಡಬೇಕು. ಸಂಘಟನೆ ಬಲಿಷ್ಟವಾಗಿದ್ದರೆ ಮಾತ್ರ ಹಕ್ಕುಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಆದ್ದರಿಂದ ಎಲ್ಲರೂ ಸಂಘಟನೆಯ ಬಗ್ಗೆ ಎಚ್ಚರಿಕೆ ಹಾಗು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಕರೆ ನೀಡಿದರು. ಸಮಾವೇಶದಲ್ಲಿ ಗ್ರಾಮ ಪಂಚಾಯಿತಿ ನೌಕರರ ವಿವಿಧ ಸಮಸ್ಯೆ, ಬೇಡಿಕೆ ಹಾಗೂ ಸಂಘಟನೆಯನ್ನು ಬಲಪಡಿಸುವ ಕುರಿತು ಚರ್ಚೆ ನಡೆಯಿತು.

ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಟಿ.ಎಸ್.ಚಂದ್ರೇಗೌಡ, ಕಾರ್ಯಾಧ್ಯಕ್ಷ ರಮೇಶ್, ಉಪಾಧ್ಯಕ್ಷ ಬಿ.ಪಿ.ರವಿ, ಕಾರ್ಯದರ್ಶಿ ಲಕ್ಷ್ಮೇಗೌಡ, ಖಜಾಂಚಿ ದಮ್ಮನಿಂಗಳ ಮಂಜುನಾಥ್, ವೀಣಾ, ಶ್ರವಣಬೆಳಗೊಳ ಹೋಬಳಿ ಅಧ್ಯಕ್ಷ ಸಿ.ಸಿ.ಅಶೋಕ್, ಗೌರವಾಧ್ಯಕ್ಷ ನಂಜುಂಡಪ್ಪ, ಉಪಾಧ್ಯಕ್ಷ ಅಣ್ಣಪ್ಪ, ಸಂಘಟನಾ ಕಾರ್ಯದರ್ಶಿ ಲಕ್ಷ್ಮಣ್ ನಾಯಕ, ಖಜಾಂಚಿ ಗಂಗನಾಯಕ, ಕೆಪಿಆರ್ಎಸ್‌ನ ಚಂದ್ರಹಾಸ ಮತ್ತಿತರರಿದ್ದರು.

# ಶಿವಲಿಂಗೇಗೌಡರ ಉಸ್ತುವಾರಿಯಲ್ಲಿ ಜಿಲ್ಲೆ ಅಭಿವೃದ್ಧಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಅರಸೀಕೆರೆ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಸಚಿವರಾಗಿ ಆಯ್ಕೆಯಾಗಿದ್ದು, ಜಿಲ್ಲೆಯ ಅಭಿವೃದ್ಧಿಗೆ ಮತ್ತಷ್ಟು ವೇಗ ಸಿಗಲಿದೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ ಹೇಳಿದರು.

ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿ, ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರ ಕನಸು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ಸರ್ಕಾರದಲ್ಲಿ ಸಾಕಾರಗೊಂಡಿದೆ. ದಶಕದ ಕನಸು ಈಡೇರಿದೆ. ಮುಂಬರುವ ದಿನಗಳಲ್ಲಿ ಜಿಲ್ಲೆಯ ಅಭಿವೃದ್ಧಿಯ ಜೊತೆಗೆ ಕಾಂಗ್ರೆಸ್ ಸಂಘಟನೆಗೂ ಆನೆ ಬಲ ಬಂದಂತಾಗಿದೆ ಎಂದರು.



ಸಂಸದ ಶ್ರೇಯಸ್ ಪಟೇಲ್, ನಾನು ಮತ್ತು ಪಕ್ಷದ ಎಲ್ಲಾ ಮುಖಂಡರು ಪಕ್ಷದ ವರಿಷ್ಟರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಳಿ ಕೆ.ಎಂ.ಶಿವಲಿಂಗೇಗೌಡರಿಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯ ಮಾಡಿದ್ದೆವು. ಮುಂಬರುವ ಸ್ಥಳೀಯ ಸಂಸ್ಥೆ ಹಾಗೂ 2028ರ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ 8 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಲು ಸಹಕಾರಿಯಾಗಲಿದೆ ಎಂದರು.

4 ಬಾರಿ ಶಾಸಕರಾಗಿ ಅರಸೀಕೆರೆ ವಿಧಾನಸಭಾ ಕ್ಷೇತ್ರದಲ್ಲಿ ಜನಮನ್ನಣೆ ಪಡೆದಿರುವ ಶಿವಲಿಂಗೇಗೌಡರು ನೀರಾವರಿ ಯೋಜನೆ ಸೇರಿ ಕ್ಷೇತ್ರದ ಅಭಿವೃದ್ಧಿಗೆ ಒತ್ತು ನೀಡಿದ್ದರಿಂದ ಸತತ ಗೆಲುವು ಸಾಧಿಸಲು ಸಾಧ್ಯವಾಗಿದೆ. ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ಅವರಿಗೆ ಅವಕಾಶ ಕಲ್ಪಿಸಿರುವುದು ಸಮಗ್ರ ಅಭಿವೃದ್ಧಿಯ ಪೂರಕವಾಗಿದೆ. ಅವರ ಕಾರ್ಯದಕ್ಷತೆಗೆ ಉತ್ತಮ ಖಾತೆ ನೀಡಿದರೆ ನಿಭಾಯಿಸುತ್ತಾರೆ ಎಂದರು.

# ನಾಳೆಯಿಂದ ಮೂರು ದಿನ ಆರೋಗ್ಯ ತಪಾಸಣಾ ಶಿಬಿರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸ್ಟಾರ್ ಹೆಲ್ತ್ ಅಂಡ್ ಅಲೈಡ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್, ಇಂಡಿಯಾನಾ ಆಸ್ಪತ್ರೆ ಮತ್ತು ಹಾರ್ಟ್ ಸೆಂಟರ್ ಹಾಗೂ ವಾಸನ್ ಐ ಕೇರ್ ಆಸ್ಪತ್ರೆ ವತಿಯಿಂದ ಆ. 5 ರಿಂದ 7ರ ವರೆಗೆ ಮೂರು ದಿನಗಳ ಆರೋಗ್ಯ ಉಚಿತ ತಪಾಸಣಾ ಶಿಬಿರ ಆಯೋಜಿಸಲಾಗಿದೆ.

ಶಿಬಿರದಲ್ಲಿ ಸಂಪೂರ್ಣ ರಕ್ತ ಪರೀಕ್ಷೆ (ಸಿಬಿಸಿ), ಯಕೃತ್ ಕಾರ್ಯಪರೀಕ್ಷೆ (ಎಲ್ಎಫ್‌ಟಿ), ಮೂತ್ರಪಿಂಡ ಕಾರ್ಯಪರೀಕ್ಷೆ (ಕೆಎಫ್‌ಟಿ), ರಕ್ತದ ಸಕ್ಕರೆ ಪರೀಕ್ಷೆ(ಉಪವಾಸ), ಇಸಿಜಿ, ಎಕೋ, ಸಂಪೂರ್ಣ ಕಣ್ಣಿನ ತಪಾಸಣೆ ಹಾಗು ತಜ್ಞ ವೈದ್ಯರ ಉಚಿತ ಸಲಹೆ ಸೇರಿ ವಿವಿಧ ಆರೋಗ್ಯ ಸೇವೆಗಳನ್ನು ಯಾವುದೇ ಶುಲ್ಕವಿಲ್ಲದೆ ಸಾರ್ವಜನಿಕರಿಗೆ ಒದಗಿಸಲಾಗುತ್ತದೆ. ಪ್ರತಿದಿನ ಬೆಳಿಗ್ಗೆ 11 ರಿಂದ ಸಂಜೆ 6ರ ವರೆಗೆ ಶಿಬಿರ ನಡೆಯಲಿದ್ದು, ಸ್ಟಾರ್ ಹೆಲ್ತ್ ಅಂಡ್ ಅಲೈಡ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಗೀತಾ ಸ್ಕ್ಯಾನಿಂಗ್ ಸೆಂಟರ್ ಮೇಲ್ಭಾಗ, 5ನೇ ಕ್ರಾಸ್ ಸಂಜೀವಿನಿ ಆಸ್ಪತ್ರೆ ಪಕ್ಕ ಕೆ.ಆರ್.ಪುರಂನಲ್ಲಿ ಆಯೋಜಿಸಲಾಗಿದೆ. ಸಾರ್ವಜನಿಕರು ನೇರವಾಗಿ ಶಿಬಿರಕ್ಕೆ ಭೇಟಿ ನೀಡಿ ಉಚಿತ ಆರೋಗ್ಯ ತಪಾಸಣೆಯ ಸೌಲಭ್ಯ ಪಡೆಯಬಹುದು.

# ನಿವೃತ್ತ ಮುಖ್ಯಶಿಕ್ಷಕ ಲೋಕೇಶ್‌ಗೆ ಬೀಳ್ಕೊಡುಗೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಸುಮಾರು 36 ವರ್ಷಗಳ ಸುದೀರ್ಘ ಸೇವೆಯ ಬಳಿಕ ನಿವೃತ್ತಿ ಹೊಂದಿದ ದುಮ್ಮಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯ ಮುಖ್ಯ ಶಿಕ್ಷಕ ಎಂ.ಲೋಕೇಶ್ ಅವರಿಗೆ ಆತ್ಮೀಯ ಬೀಳ್ಕೊಡುಗೆ ನೀಡಲಾಯಿತು.

ಕಸಬಾ ಹೋಬಳಿಯ ನೆರಳಹಳ್ಳಿ ಗ್ರಾಮದ ಎಂ.ಲೋಕೇಶ್ ಅವರು 36 ವರ್ಷ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ತಮ್ಮ ಸೇವಾವಧಿಯಲ್ಲಿ ದುಮ್ಮಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ಸುಮಾರು 15 ವರ್ಷಗಳ ಕಾಲ ಮುಖ್ಯ ಶಿಕ್ಷಕರಾಗಿ ಕಾರ್ಯನಿರ್ವಹಿಸಿದ ಅವರು, ಶಾಲೆಯ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವುದು, ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಉತ್ತೇಜನ ನೀಡುವುದು ಹಾಗು



ಸಮಾಜಮುಖಿ ಚಟುವಟಿಕೆಗಳನ್ನು ಯಶಸ್ವಿಯಾಗಿ ರೂಪಿಸುವ ಮೂಲಕ ವಿಶಿಷ್ಟ ಗುರುತು ಮೂಡಿಸಿದ್ದಾರೆ.

ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಪಿ.ನಾರಾಯಣ ಮಾತನಾಡಿ, ಲೋಕೇಶ್ ಅವರು ಶಿಕ್ಷಣ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಶ್ಲಾಘನೀಯವಾಗಿದ್ದು, ನಿವೃತ್ತಿ ಜೀವನ ಸುಖ, ಶಾಂತಿ ಹಾಗೂ ಆರೋಗ್ಯದಿಂದ ಕೂಡಿರಲಿ ಎಂದು ಶುಭ ಹಾರೈಸಿದರು.

ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ರಂಗಸ್ವಾಮಿ ಮಾತನಾಡಿ, ಎಂ.ಲೋಕೇಶ್ ಅವರ ಸೇವಾ ಮನೋಭಾವವನ್ನು ಕೊಂಡಾಡಿದರು. ದೊಡ್ಡಮಗ್ಗೆ ಹೋಬಳಿಯ ಶಿಕ್ಷಣ ಸಂಯೋಜಕ ಯೋಗೇಶ್ ಅವರು ಮಾತನಾಡಿ, ಲೋಕೇಶ್ ಅವರ ಶಿಸ್ತು, ನಾಯಕತ್ವ, ಬದ್ಧತೆ ಹಾಗು ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿದ ಅಮೂಲ್ಯ ಸೇವೆಯನ್ನು ಸ್ಮರಿಸಿದರು.

ನಿವೃತ್ತ ಮುಖ್ಯಶಿಕ್ಷಕ ಎಂ.ಲೋಕೇಶ್ ಮಾತನಾಡಿ, 36 ವರ್ಷಗಳ ಶಿಕ್ಷಕ ಜೀವನ ನನ್ನ ಬದುಕಿನ ಅತ್ಯಂತ ಅಮೂಲ್ಯ ಅಧ್ಯಾಯವಾಗಿದೆ. ಸಾವಿರಾರು ಮಕ್ಕಳಿಗೆ ಶಿಕ್ಷಣ ನೀಡುವ ಅವಕಾಶ ದೊರೆತಿರುವುದು ಜೀವನದ ದೊಡ್ಡ ಭಾಗ್ಯ. ದುಮ್ಮಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 15 ವರ್ಷ ಸೇವೆ ಸಲ್ಲಿಸಿರುವುದು ಹೆಮ್ಮೆಯ ಕ್ಷಣವಾಗಿದೆ. ಈ ಶಾಲೆಯ ವಿದ್ಯಾರ್ಥಿಗಳು, ಸಹೋದ್ಯೋಗಿಗಳು, ಎಸ್‌ಡಿಎಂಸಿ ಸದಸ್ಯರು, ಪೋಷಕರು ಹಾಗು ಗ್ರಾಮಸ್ಥರು ನನಗೆ ನೀಡಿದ ಪ್ರೀತಿ, ವಿಶ್ವಾಸ ಮತ್ತು ಸಹಕಾರವನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ನನ್ನ ಸೇವಾ ಅವಧಿಯಲ್ಲಿ ಮಾರ್ಗದರ್ಶನ ನೀಡಿದ ಶಿಕ್ಷಣ ಇಲಾಖೆಯ ಎಲ್ಲ ಅಧಿಕಾರಿಗಳಿಗೆ, ಜೊತೆಯಾಗಿ ಕಾರ್ಯನಿರ್ವಹಿಸಿದ ಶಿಕ್ಷಕ ಮಿತ್ರರಿಗೆ, ನನ್ನ ಕುಟುಂಬದವರಿಗೆ ಹಾಗು ನನ್ನನ್ನು ಪ್ರೋತ್ಸಾಹಿಸಿದ ಪ್ರತಿಯೊಬ್ಬರಿಗೂ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತೇನೆಂದು ಭಾವುಕರಾದರು.

# ಅಕ್ರಮ ಪ್ರವೇಶ: 7 ಮಹೀಂದ್ರ ಥಾರ್ ಜೀಪ್ ವಶಕ್ಕೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಅರಣ್ಯ ಪ್ರದೇಶಕ್ಕೆ ಅಕ್ರಮವಾಗಿ ಪ್ರವೇಶಿಸಿ ಮಹೀಂದ್ರ ಥಾರ್ ಜೀಪ್‌ಗಳಲ್ಲಿ ಆಫ್‌ರೋಡ್ ನಡೆಸುವ ಮೂಲಕ ಪರಿಸರ ಹಾಗೂ ವನ್ಯಜೀವಿಗಳಿಗೆ ಹಾನಿ ಉಂಟು ಮಾಡುತ್ತಿದ್ದ ಬೆಂಗಳೂರಿನ ಪ್ರವಾಸಿಗರ ವಿರುದ್ಧ ಸಕಲೇಶಪುರ ಅರಣ್ಯ ಇಲಾಖೆ ಕಠಿಣ ಕ್ರಮ ಕೈಗೊಂಡಿದ್ದು, 7 ಮಹೀಂದ್ರ ಥಾರ್ ಜೀಪ್‌ಗಳನ್ನು ಜಪ್ತಿ ಮಾಡಿದ್ದಾರೆ.

ಆ. 1ರಂದು ಸಕಲೇಶಪುರ ವಲಯದ ಕಬ್ಬಿನಾಲೆ ಶಾಖೆಯ ಗಸ್ತು ವ್ಯಾಪ್ತಿಯ ದೊಡಬೆಳ್ಳಿ ಗ್ರಾಮದ ಪರಿಭಾವಿತ ಅರಣ್ಯ ಪ್ರದೇಶದ ಸರ್ವೆ ನಂ. 20, 21 ಹಾಗೂ 28ರಲ್ಲಿ ಬೆಂಗಳೂರಿನಿಂದ ಬಂದಿದ್ದ ಪ್ರವಾಸಿಗರ ತಂಡ ಅಕ್ರಮವಾಗಿ ಅರಣ್ಯ ಪ್ರದೇಶಕ್ಕೆ ಪ್ರವೇಶಿಸಿತ್ತು. ಬಳಿಕ ಅವರು ಏಳು ಮಹೀಂದ್ರ ಥಾರ್ ಜೀಪ್‌ಗಳಲ್ಲಿ ಆಫ್‌ರೋಡ್ ಚಾಲನೆ ನಡೆಸುತ್ತಿರುವುದನ್ನು ಅರಣ್ಯ ಸಿಬ್ಬಂದಿ ಪತ್ತೆಹಚ್ಚಿದ್ದಾರೆ.

ತಕ್ಷಣ ಕಾರ್ಯಾಚರಣೆ ನಡೆಸಿದ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಎಲ್ಲಾ ಏಳು ವಾಹನಗಳನ್ನು ವಶಕ್ಕೆ ಪಡೆದರು. ಅರಣ್ಯ ಪ್ರದೇಶದಲ್ಲಿ ಅನಧಿಕೃತವಾಗಿ ವಾಹನ ಸಂಚರಿಸುವುದರಿಂದ ಅರಣ್ಯ ಸಂಪತ್ತು, ವನ್ಯಜೀವಿಗಳ ವಾಸಸ್ಥಾನ ಹಾಗೂ ಪರಿಸರಕ್ಕೆ ಹಾನಿಯಾಗುವುದರಿಂದ ತಪ್ಪಿತಸ್ಥರ ವಿರುದ್ಧ ಅರಣ್ಯ ಕಾಯ್ದೆಯಡಿ ಪ್ರಕರಣ ದಾಖಲಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಆಗಸ್ಟ್-04

1789: ಫ್ರಾನ್ಸ್‌ನಲ್ಲಿ ಸಾಮಂತಶಾಹಿ ವ್ಯವಸ್ಥೆಯನ್ನು ರದ್ದುಪಡಿಸುವ ಐತಿಹಾಸಿಕ ನಿರ್ಧಾರ ಕೈಗೊಳ್ಳಲಾಯಿತು.

1914: ಮೊದಲ ಮಹಾಯುದ್ಧದ ಸಂದರ್ಭದಲ್ಲಿ ಬ್ರಿಟನ್ ಜರ್ಮನಿಯ ವಿರುದ್ಧ ಯುದ್ಧ ಘೋಷಿಸಿತು.

1944: ನೆದರ್ಲ್ಯಾಂಡ್ಸ್‌ನ ಆಮ್ಸ್ಟರ್ ಡ್ಯಾಮ್‌ನಲ್ಲಿ ಆನ್ ಫ್ರಾಂಕ್ ಮತ್ತು ಅವರ ಕುಟುಂಬವನ್ನು ನಾಜಿ ಪಡೆಗಳು ಬಂಧಿಸಿದವು.

2020: ಬೈರುತ್ (ಲೆಬನಾನ್) ಬಂದರಿನಲ್ಲಿ ಸಂಭವಿಸಿದ ಭಾರೀ ಸ್ಫೋಟ ವಿಶ್ವದ ಗಮನ ಸೆಳೆಯಿತು.

### ಜನನ

1929: ಕಿಶೋರ್ ಕುಮಾರ್, ಭಾರತೀಯ ಚಿತ್ರರಂಗದ ಖ್ಯಾತ ಗಾಯಕ, ನಟ ಹಾಗೂ ಸಂಗೀತ ನಿರ್ದೇಶಕ

1961: ಬರಾಕ್ ಒಬಾಮಾ, ಅಮೆರಿಕದ ಮಾಜಿ ರಾಷ್ಟ್ರಪತಿ

### ನಿಧನ

1906: ಜಾನ್ ವೆನ್, ನೊಬೆಲ್ ಪ್ರಶಸ್ತಿ ವಿಜೇತ ರಸಾಯನಶಾಸ್ತ್ರಜ್ಞ

1977: ಎರ್ನೆಸ್ಟ್ ಬ್ಲೋಕ್, ಖ್ಯಾತ ಸಂಗೀತ ಸಂಯೋಜಕ

# ಲಲಿತಾ-6

**ಗ್ರಾಮಾಯಣ-38**

**– ಧನಂಜಯ ಜೀವಾಳ ಬಿ.ಕೆ.**



ಕಾಡು ಪ್ರಾಣಿಗಳ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿದ್ದ ಎತ್ತಿನಹೊಳೆ ಕಿಶೋರ್, ವನ್ಯಜೀವಿಗಳು ಸಂಚರಿಸುವ ಪ್ರದೇಶಗಳಲ್ಲಿ ಯಾವುದೇ ರೀತಿಯ ಬೇಲಿಯನ್ನು ನಿರ್ಮಿಸುವುದನ್ನು ನಿಷೇಧಿಸುವುದು ಅತ್ಯಗತ್ಯ. ರಕ್ಷಿತಾರಣ್ಯದ ಸುತ್ತಾ ತಂತಿ ಬೇಲಿ ಹಾಕುವ ಅರಣ್ಯ ಇಲಾಖೆಯ ಕ್ರಮದಿಂದ ವನ್ಯಜೀವಿಗಳು ಸಹಜವಾಗಿ ಅಡ್ಡಾಡಲಾಗದೇ ಬೇಲಿಗುಂಟ ಗಂಡಿಯನ್ನರಸುತ್ತಾ ಸಾಗಿ ಜನವಸತಿ ಪ್ರದೇಶಕ್ಕೆ ಬರುತ್ತವೆ. ವಿವಿಧ ಬಗೆಯ ಅವಘಡಗಳಿಗೆ ಕಾರಣವಾಗುತ್ತವೆ. ಕಾಡು ಹೇಗೆ ವರ್ತಿಸುತ್ತದೆ ಎಂಬ ಕನಿಷ್ಠ ಪ್ರಜ್ಞೆ ಇಲ್ಲದವರುಗಳು ಮಾಡುವ ಅವಿವೇಕದ ತೀರ್ಮಾನ ಸಾರ್ವಜನಿಕ ಬೊಕ್ಕಸ ಬರಿದು ಮಾಡುವ ಜೊತೆಗೆ ಅನರ್ಥಗಳಿಗೆ ಆಸ್ಪದ ನೀಡುತ್ತದೆ. ವನ್ಯಜೀವಿಗಳು ನಿರಾತಂಕವಾಗಿ ಜೀವಿಸಲು ಅನುವಾಗುವಂತೆ ಕಾಡಿನೊಳಗೆ ಹಣ್ಣು ಬಿಡುವಂಥಾ ಸ್ಥಳೀಯ ಪ್ರಭೇದದ ಮರದ ಗಿಡಗಳನ್ನು ನೆಡಬೇಕು. ಜನವಸತಿ ಪ್ರದೇಶ ಮತ್ತು ಕೃಷಿಭೂಮಿಯಲ್ಲಿನ ಮಂಗಗಳನ್ನು ಹಿಡಿದು ಸಾಮೂಹಿಕ ಸಂತಾನ ಶಕ್ತಿಹರಣ ಕ್ರಮ ಕೈಗೊಳ್ಳಬೇಕು.

ಮಂತ್ರಿಗಳ ಕಾರ್ಯಕ್ರಮವೆಂದು ತಮ್ಮ ಕೆಲಸವನ್ನೆಲ್ಲ ಬಿಟ್ಟು ಹಲ್ಲು ಗಿಂಜುತ್ತಾ ಸಚಿವರಿಗೆ, ಮೇಲಧಿಕಾರಿಗಳಿಗೆ ಬಕೇಟು ಹಿಡಿಯುತ್ತಾ ಬಫೂನುಗಳಂತೆ ವರ್ತಿಸುತ್ತಾ ವಿನಾಕಾರಣ ಅಲ್ಲಲ್ಲಿ ಅಡ್ಡಾಡುತಿದ್ದ ಇಲಾಖೆಯ ಅಧಿಕಾರಿಗಳತ್ತ ನೋಡಿ, ಹಂಗಾಡಿ, ಹಿಂಗಾಡಿ ಮಂಗ ಹಿಡಿಯೋರಿಗೆ ದುಡ್ಡು ಮಾಡಿಕೊಟ್ರಿ. ತೋಟಗಳಿಗೆ ಬರುವ ಮಂಗಗಳ ಹಾವಳಿಯನ್ನು ನಿಯಂತ್ರಿಸಲು ಕೊಲ್ಲುವುದನ್ನು ಬಿಟ್ಟು ಬೇರೆ ಯಾವ ಕ್ರಮ ಕೈಗೊಳ್ಳಬಹುದು? ಅಧಿಕಾರದ ಸ್ಥಾನದಲ್ಲಿರುವ ನೀವುಗಳೇ ಇದಕ್ಕೆ ಪರಿಹಾರದ ಉತ್ತರ ಹೇಳಬೇಕು. ಇಲ್ಲದಿದ್ದರೆ ನಿಮ್ಮ ಜವಾಬ್ದಾರಿ ತ್ಯಜಿಸಿ ಮನೆಗೆ ನಡೆಯಿರಿ. ನಿಮಗಿಂತ ಉತ್ತಮರಿಗೆ ಅವಕಾಶ ಮಾಡಿಕೊಡಿ ಎಂದು ಹಿಗ್ಗಾಮುಗ್ಗ ಜಾಡಿಸಿದರು.

ಜನರಲ್ಲಿ ಮೂಡಿರುವ ಈ ಜಾಗೃತಿ ನಿಧಾನವಾಗಿ ತನ್ನ ಕಾವನ್ನು ಕಳೆದುಕೊಳ್ಳದಂತೆ ಉಳಿಸಿಕೊಂಡೇ ಹೋಗಬೇಕೆಂದು ನಿರ್ಧರಿಸಿದ ಪ್ರತಿಭಟನೆಯ ನೇತೃತ್ವ ವಹಿಸಿಕೊಂಡಿದ್ದವರುಗಳು, ಇದಾಗಿ ಹದಿನೈದು ದಿನಗಳ ನಂತರ ಎತ್ತಿನಹೊಳೆಗೂ ಮತ್ತು ಕುದೋಳಿನ ನಡುವಿನ ರಸ್ತೆಯ ಎರಡೂ ಬದಿಯಲ್ಲಿ ಗಿಡನೆಡಲು ಯೋಜಿಸಿದರು.

ರಸ್ತೆ ಬದಿ ಗಿಡ ನೆಡುವ ಕಾರ್ಯಕ್ರಮಕ್ಕೆ ಕರೆ ಬಂದಿದ್ದರಿಂದ ಕುದೋಳಿನ ಯುವತಿ ಮಂಡಳಿಯವರೂ ಹೋಗಿದ್ದಾರೆ. ಅವರೊಟ್ಟಿಗೆ ತನ್ನ ಆಪ್ತ ಗೆಳತಿಯರ ಜೊತೆಗೂಡಿ ಸ್ವಯಂಸೇವಕರಾಗಿ ಕೈಜೋಡಿಸಿದ ಲಲಿತ ಗಿಡ ನೆಟ್ಟಿದ್ದಕ್ಕಿಂತ ಗಿರೀಶನತ್ತ ಕಣ್ಣು ನೆಟ್ಟಿದ್ದೇ ಹೆಚ್ಚು. ಎಲ್ಲ ಸ್ವಯಂಸೇವಕರು ಒಂದೆಡೆ ಗುಂಡಿ ತೆಗೆಯುವುದು, ಗಿಡ ಹೊತ್ತು ತರುವುದು, ಗಿಡದ ಕವರ್‌ನ್ನು ಕತ್ತರಿಸಿ ತೆಗೆಯುವುದು, ತೆಗೆದ ಗುಂಡಿಯೊಳಗಿರಿಸಿ, ಪಕ್ಕದಲ್ಲೊಂದು ಮಾರುದ್ದದ ಬಿದುರಿನ ಕೋಲೊಂದನ್ನು ನಿಲ್ಲಿಸಿ ಮಣ್ಣು ಮುಚ್ಚುವುದು, ಮುಚ್ಚಿದ ಮಣ್ಣನ್ನು ಗೋಪುರದಂತೆ ರಾಶಿ ಹಾಕಿ ಮೆಟ್ಟಿ ಗಟ್ಟಿಗೊಳಿಸುವುದು, ದನ ತಿನ್ನದಂತೆ ಈಚಲ ಗರಿಗಳನ್ನು ಉದ್ದಕ್ಕೆ ಸೀಳಿ, ಗಿಡ ಹಾಗು ಕಂಬವನ್ನು ಸೇರಿಸಿ ಈಚಲ ಮುಳ್ಳಿನೆಲೆಗಳು ಕೆದರುವಂತೆ ಜಡೆಹೆಣೆದು ಕಟ್ಟುವುದು ಮಾಡುತಿದ್ದರೆ, ಈ ಲಲಿತ ಮತ್ತವಳ ಇಬ್ಬರು ಗೆಳತಿಯರು ಮೈಗಳ್ಳತನ ಮಾಡುತ್ತಾ ಮಾನ್ಯ ಗಿರೀಶ್ಮೇಷ್ಟ್ರನ್ನೇ ಹಿಂಬಾಲಿಸುತ್ತಾ ಬರುತಿದ್ದರು. ಗಿಡಗಳನ್ನು ಸರಿಯಾಗಿ ನೆಟ್ಟಿದ್ದಾರೆಯೇ, ಮುಳ್ಳನ್ನು ಬಿಗಿಯಾಗಿ ಸುತ್ತಿದ್ದಾರೆಯೇ ಎಂದು ಪರೀಕ್ಷಿಸುತ್ತಾ, ನೆಟ್ಟ ಗಿಡ ಡೊಂಕಾಗಿದ್ದರೆ, ಸುತ್ತಲಿನ ಮಣ್ಣನ್ನು ಕಾಲಿನಿಂದ ಬಲವಾಗಿ ಮೆಟ್ಟಿ, ಈಚಲ ಮುಳ್ಳು ಬಿಚ್ಚಿಕೊಳ್ಳುವಂತಿದ್ದರೆ, ತನ್ನ ಕೈಯ್ಯಲ್ಲಿದ್ದ ಸುತ್ತಿ ದಾರದಿಂದ ಬಿಗಿಗೊಳಿಸುತ್ತಾ ಗಿರೀಷ್ಮೇಷ್ಟ್ರು ಬರುತಿದ್ದರೆ, ಈ ಲಲಿತ ಮತ್ತವಳ ಇಬ್ಬರು ಗೆಳತಿಯರು ಸಾರ್, ಇಲ್ಲೊಂದು ಗಿಡದ ಕಂಬಕ್ಕೆ ಮುಳ್ಳನ್ನೇ ಕಟ್ಟಿಲ್ಲ, ಹಾಗೇ ಈಚಲಗರಿಯನ್ನು ಇಟ್ಟು ಹೋಗಿದ್ದಾರೆ, ಮುಳ್ಳು ಕಟ್ಟಕ್ಕೆ ನಮಗೆ ಬರಲ್ಲ, ಬನ್ನೀ ಸಾರ್ ರಾಗವಾಗಿ, ತಿರಸ್ಕರಿಸಲು ಸಾಧ್ಯವೇ ಇಲ್ಲದಂತೆ ಆಹ್ವಾನಿಸಿದರು. ಬೇಗ ಬೇಗ ಕೆಲಸ ನಡೆಯಲು, ಕಂಬ, ಗಿಡ, ಮುಳ್ಳು ಎಲ್ಲವೂ ನಿಗದಿಯಾದಂತೆ ಒದಗಿಸಲು ಜವಾಬ್ದಾರಿ ಹೊತ್ತಿದ್ದ ಆನಂದ, ಮೋಹನ, ಭಾಸ್ಕರ, ಮೂರ್ತಿ, ರವಿ ಮುಂತಾದವರು ಲಗುಬಗೆಯಿಂದ ಪಾದರಸದಂತೆ ಓಡಾಡುತಿದ್ದರು. ಇನ್ನು ಗುಂಡಿ ತೆಗೆಯಲು ಹಾಗೂ ಗಿಡ ನೆಟ್ಟ ಗುಂಡಿಗೆ ಮಣ್ಣು ತುಂಬಿ ಮೆಟ್ಟಲು ಹೊಣೆ ಹೊತ್ತಿದ್ದ ಶಿವಕುಮಾರ, ರಾಮಣ್ಣ, ರಾಜಶೇಖರ, ನಾಗರಾಜು ಮುಂತಾದವರು ಕುದೋಳು ಹಾಗೂ ಎತ್ತಿನಹೊಳೆಯೇ ಒಂದಾಗುವಂತೆ ಉತ್ಸಾಹದಿಂದ ಖುಷಿಯಲ್ಲಿ ಕೂಗಾಡುತ್ತಾ ಜತೆಯಲ್ಲಿದ್ದ ಶಾಲಾ ಮಕ್ಕಳು ಹಾಗೂ ಮಂಡಳಿಯ ಯುವತಿಯರನ್ನು ಹುರಿದುಂಬಿಸುತ್ತಾ, ರೇಗಿಸುತ್ತಾ, ಪ್ರೀತಿಯಿಂದಲೇ ಗದರಿಸುತ್ತಾ ಕೋಲಾಹಲವನ್ನೇ ಉಂಟುಮಾಡಿದ್ದರು.

ದನಿ ಬಂದತ್ತ ತಿರುಗಿದ ಗಿರೀಷ್ಮೇಷ್ಟ್ರಿಗೆ ಕಂಡದ್ದು ಇಷ್ಟಗಲ ಕಣ್ಣಿನ ಸಾಕ್ಷಾತ್ ಅಪ್ಸರೆಯಂತೆ ನಿಂತು ತಾಗಿದೆಯೋ ತಾಗಿಲ್ಲವೋ ಎಂಬಂತೆ ತುದೀ ಬೆರಳಲ್ಲಿ ಈಚಲಗರಿ ಹಿಡಿದು ನಿಂತಿದ್ದ ಲಲಿತ! ಮೇಷ್ಟ್ರೆದೆ ಧಸಕ್ಕೆಂದಿತು. ಭುಜಗಳು ಸಣ್ಣಗೆ ಕಂಪಿಸಲಾರಂಭಿಸಿದವು. ಕಾಲುಗಳು ನಿಂತಲ್ಲೇ ಹೂತುಹೋಗಿವೆಯೇನೋ ಎನ್ನುವಂತೆ ಸ್ಥಬ್ಧವಾದವು. ಸಳಸಳನೆ ಏರುತಿದ್ದ ಆ ಬಿಸಿಲಿನಲಿ ಲಲಿತಳು ಇನ್ನೂ ಕೆಂಪಾಗಿಯೂ ಗಿರೀಷ್ಮೇಷ್ಟ್ರು ಮತ್ತಷ್ಟು ಕಪ್ಪಾಗಿಯೂ ಫಳಫಳಿಸಲಾರಂಭಿಸಿದರು.

ಸಡನ್ನಾಗಿ ವಾಸ್ತವಕ್ಕೆ ಬಂದ ಮೇಷ್ಟ್ರು ಯಾರಾದ್ರೂ ನೋಡಿದ್ರೆ ಮಿಸ್ಟೇಕ್ ಮಾಡ್ಕಂತಾರೆ ಎಂದು, ರೀ, ಚಿಕ್ಕಣ್ಣಾ, ಹೋಗ್ರೀ, ಅಲ್ಲೊಂದು ಗಿಡಕ್ಕೆ ಮುಳ್ಳು ಕಟ್ಟೋದು ಬಿಟ್ಹೋಗಿದೆಯಂತೆ, ನೋಡಿ ಅದನ್ನ ಕಟ್ಟಿ ಬನ್ನಿ ಎಂದರು. ಲಲಿತಳ ಮುಖ ಸಣ್ಣಗಾಯಿತು. ಈಚಲಗರಿಯನ್ನು ಹಿಡಿದಿದ್ದ ಹೆಬ್ಬೆರಳು ಹಾಗೂ ತೋರ್ಬೆರಳುಗಳು ಹಾಗೆಯೇ ಸದ್ದಿಲ್ಲದೇ ಬೇರ್ಪಟ್ಟ ಕೂಡಲೇ ಗರಿ ಧರಾಶಾಯಿಯಾಯ್ತು. ಪೆಚ್ಚುಮೋರೆಯೊಂದಿಗೆ ತನ್ನ ಹಸಿರು ಉದ್ದಲಂಗವನ್ನು ಮಣ್ಣು ತಾಗದಂತೆ ನೆಲದಿಂದ ಗೇಣುದ್ದಕ್ಕೆ ಎತ್ತಿಕೊಂಡು ಮೇಷ್ಟ್ರು ಕಡೆ ಹುಸಿಮುನಿಸಿನಿಂದ ನೋಡುತ್ತಾ ಮುಖವನ್ನು ಕುಂಬಳಕಾಯಿಯಂತೆ ಊದಿಸಿಕೊಂಡು ಏಯ್, ನಿಲ್ರೇ. ನನ್ನೊಬ್ಬಳನ್ನೇ ಬಿಟ್ಟು ಹೋಗಿದ್ದೀರಾ? ಎಂದು ಗೆಳತಿಯರೆಡೆಗೆ ಆಕ್ಷೇಪದಿಂದ ಕೂಗಿದಳು. ಆಕೆಯರಿಬ್ಬರು ಒಬ್ಬರೆಡೆಗೊಬ್ಬರು ನೋಡಿಕೊಂಡು ಲಲಿತಳನ್ನುದ್ದೇಶಿಸಿ ಸ್ವಾಟೆ ಮುರಿದು ಖಿಲ್ಲೆಂದರು.

ಮೇಷ್ಟ್ರು ಹತ್ತಿರ ಬಂದ ಆಕೆಯರಿಬ್ಬರೂ ಸಾರ್ ಲಲಿತ ನಿಮ್ತ್ರನ್ನೇನೋ ಕೇಳ್ಬೇಕಂತ, ನಮ್ಮಿಬ್ರನ್ನ ಮುಂದಕ್ಕೆ ಕಳಿಸಿದವಳು ಈಗ ನಮ್ಮನ್ನೇ ದೂರ್ತಾ ಇದಾಳೆ ನೋಡಿ ಸಾರ್. ನೋಡಿ, ಹೇಗೆ ಹಗ್ಗ ಬಿಚ್ಚಿದ ಎಳೆಗರು ನೆಕ್ಕೊಂಡ್ ನೆಕ್ಕೊಂಡ್ ಬರೋ ಹಂಗೆ ಬರ್ತಿದಾಳೆ. ನಾವಿಬ್ರೂ ಮುಂದೆ ಹೋಗಿರ್ತೀವಿ, ಅದೇನೋ ಹೇಳಲಿಕ್ಕಿದೆಯಂತೆ ಒಂದ್ಸಲ ಕೇಳಿಸ್ಕಂಬಿಡಿ ಸಾರ್. ಮುಂದಿನ ತಿಂಗಳಿಂದ ಕಾಲೇಜು ಶುರುವಾಗಲಿದೆಯಂತೆ. ಅದೇನಿದ್ರೂ ಇವತ್ತು ತೀರ್ಮಾನ ಮಾಡ್ಕಂಡೇ ಮಾಡ್ಕೋತೀನಿ ಅಂತ ಹೇಳ್ತಿದಾಳೆ. ಒಂದ್ಸಲ ಮಾತಾಡ್ಸಿ ಬಿಡಿ ಸಾರ್ ಕಿಸಕ್ ಎಂದು ಮುಂದಕ್ಕೋಡಿದರು.

ಇದ್ಯಾಕೋ ನಿಯಂತ್ರಣ ತಪ್ಪಿ ಹೋಗ್ತಿದೆ ಎಂದೆಣಿಸಿ, ತಾನೂ ಬಿರಬಿರನೆ ಹೆಜ್ಜೆ ಹಾಕುತಿದ್ದಂತೆ ಮೇಷ್ಟ್ರು ಅಲ್ಲೊಂದು ಗುಂಡಿಯಲಿ ಗಿಡ ನೆಡದೇ ಹಾಗೇ ಉಳಿದುಹೋಗಿದ್ದನ್ನು ಗಮನಿಸಿದರು. ಗಿಡ, ಕೋಲು ಎಲ್ಲವನ್ನು ಇಟ್ಟಿದ್ದರೂ ಗಿಡವನ್ನು ನೆಡದೇ ಮರೆತು ಮುಂದೆ ಹೋಗಿದ್ದರು. ಇನ್ನು ಇದನ್ನು ಹೀಗೇ ಬಿಟ್ಟರೆ ಶಾಶ್ವತವಾಗಿ ಉಳಿದೇ ಹೋಗುತ್ತದೆ, ಈಗಲೇ ನೆಡುವುದು ಸೂಕ್ತವೆಂದೆಣಿಸಿ, ಅಲ್ಲೇ ಕುಳಿತು ಗಿಡದ ಕವರ್‌ನ್ನು ಹರಿದುತೆಗೆದು ಗಿಡ ಸಮೇತ ಆ ಹಸಿಮಣ್ಣಿನ ಹೆಂಟೆಯನ್ನು ಗುಂಡಿಯೊಳಗೆ ಇಳಿಸಿದರು. ನೋಡನೋಡುತಿದ್ದಂತೆ ಹಸಿರಾದ ಬಿದಿರು ಕೋಲೊಂದು ಗುಂಡಿಯೊಳಗಿಳಿಯಿತು. ಯಾರಿದೆಂದು ತಲೆಯೆತ್ತಿ ನೋಡಿದರು ಮೇಷ್ಟ್ರು, ಎದೆ ಢವಢವ ಎಂದು ಬಡಿದುಕೊಳ್ಳಲಾರಂಭಿಸಿತು. ಅಗೆದು ಹೊರಹಾಕಿದ್ದ ಮಣ್ಣನ್ನು ಗುಂಡಿಯೊಳಗೆ ನೂಕಲು ಕೈಯ್ಯಲ್ಲಿ ಬಲವೇ ಇಲ್ಲದಂತಾಯಿತು.

ಕುಡಿಯಲು ನೀರು ಬೇಕ ಸಾರ್? ಎಂದಳು ಲಲಿತ. ಅರಿವಿಲ್ಲದಂತೆ ಹೂ, ಬೇಕು ಎಂದರು ಮೇಷ್ಟ್ರು. ತನ್ನ ಬೆನ್ನ ಹಿಂದಿನ ಬ್ಯಾಗಿನಲ್ಲಿದ್ದ ನೀರಿನ ಕ್ಯಾನನ್ನು ತೆಗೆದು ದೇವರ ನೈವೇದ್ಯಕ್ಕೆ ಪುಣ್ಯಜಲವನ್ನು ಕೊಡುತಿದ್ದೇನೇನೋ ಎಂಬ ಭಾವದಿಂದ ನೀರಿನ ಕ್ಯಾನಿನ ಮುಚ್ಚುಳವನ್ನು ಸ್ಲೋಮೋಷನ್ನಿನಲ್ಲಿ ತೆರೆದ ಲಲಿತ ಮೇಷ್ಟ್ರ ಕಣ್ಣನ್ನೇ ನೋಡುತ್ತಾ ಕೈಚಾಚಿದಳು. ಮೇಷ್ಟ್ರು ಗಾಬರಿಯಿಂದ ಏನಕ್ಕೋ ನೋಡುವವರಂತೆ ಸುತ್ತಲೂ ನೋಡಿದರು. ಪುಣ್ಯ, ಯಾರೂ ನೋಡ್ತಿಲ್ಲ. ಸಾರ್ ನಿಮಗೆ ಏನನ್ನೋ ಹೇಳಬೇಕು ಸಾರ್ ಎಂದಳು ಲಲಿತ. ಮೇಷ್ಟ್ರ ಎದೆಯಲ್ಲಿ ಒನಕೆ ಕುಟ್ಟಿದಂತಾಗುತಿತ್ತು. ಲಲಿತ ಹಾಗೇ ಗುಂಡಿಯ ಪಕ್ಕದಲ್ಲಿ ಎರಡೂ ಮಂಡಿಯೂರಿ ಕುಳಿತು ನಿಧಾನವಾಗಿ ಮಣ್ಣನ್ನು ಗುಂಡಿಯೊಳಗೆ ನೂಕಲಾರಂಭಿಸಿದಳು. ಅದೇನೋ ನಿರ್ಧರಿಸಿದವರಂತೆ ಮೇಷ್ಟ್ರು ಲಲಿತಾ, ನನಗೆ ನೀನು ಇಷ್ಟ ಆಗಿದೀಯ. ನನ್ನನ್ನು ಮದುವೆಯಾಗ್ತೀಯಾ? ಎಂದೇಬಿಟ್ಟರು. ಅನಿರೀಕ್ಷಿತವಾಗಿ ಬಂದ ದನಿಯನ್ನು ಇನ್ನೆಂದೂ ಕಳೆದುಹೋಗದಂತೆ, ಎಂದೆಂದಿಗೂ ಮಾಸಿಹೋಗದಂತೆ, ಇನ್ನೆಂದೂ ಕ್ಷೀಣವಾಗದಂತೆ ಕಣ್ಣು, ಕಿವಿ, ಮೂಗು, ಸ್ಪರ್ಷ ಹೀಗೆ ಎಲ್ಲ ಇಂದ್ರಿಯಗಳ ಮೂಲಕ ಇನ್ನಿಲ್ಲದಂತೆ ಆಳವಾಗಿ ಅನುಭವಿಸಿ ಗ್ರಹಿಸಿದ ಲಲಿತ, ಹಿಂದೆಂದೂ ಅಷ್ಟು ಆಳವಾಗಿ ಉಸಿರು ತೆಗೆದುಕೊಂಡಿಲ್ಲವೆಂಬಂತೆ ತನ್ನ ಎರಡೂ ಕಣ್ಣುಗಳನ್ನು ಅರ್ಧನಿಮೀಲಿತವಾಗಿ ಮುಚ್ಚಿ ಇಡೀ ಬ್ರಹ್ಮಾಂಡವನ್ನೇ ಉಶ್ವಾಸಿಸುವಂತೆ ಪೂರ್ಣ ಉಸಿರೆಳೆದುಕೊಂಡಳು. ಈ ಕ್ಷಣಕ್ಕೆ ತನ್ನ ಜನುಮ ಸಾರ್ಥಕವಾಯಿತೇನೋ ಎಂಬಂತೆ ಹಾಗೇ ಬಗ್ಗಿ ಮೇಷ್ಟ್ರ ಎರಡೂ ಪಾದಗಳನ್ನು ತನ್ನೆರಡೂ ಹಸ್ತಗಳಿಂದ ನೆಲಕ್ಕೆ ಒತ್ತಿ ಹಿಡಿದಳು. ಇನ್ನು ಯಾರು ಏನೆಂದುಕೊಂಡರೂ ಚಿಂತೆಯಿಲ್ಲವೆಂದುಕೊಂಡ ಮೇಷ್ಟ್ರು ತಮ್ಮ ಬದುಕೂ ಧನ್ಯವಾಯಿತೆಂದುಕೊಂಡು ಹಾಗೆಯೇ ಕುಸಿದು ಕುಳಿತರು. ಇಬ್ಬರೂ ಏನೂ ಮಾತಾಡದೇ, ತಾವು ನೆಟ್ಟಿದ್ದ ಆ ಆಳೆತ್ತರದ ಗಿಡದತ್ತ ನೋಡಿದರು. ಅತ್ಯಂತ ಆರೋಗ್ಯಪೂರ್ಣವಾಗಿ ಬೆಳೆದಿದ್ದ ಸಂಪಿಗೆ ಗಿಡ ತನಗೆ ಆಧಾರಕ್ಕೆ ಕೊಟ್ಟಿದ್ದ ಬಿದಿರಿನ ಕಂಬದ ಅಗತ್ಯವೇ ಇಲ್ಲವೆಂಬಂತೆ ಆಗಷ್ಟೇ ಪಕ್ಕದ ಕೆರೆಯ ಮೇಲಿಂದ ಬೀಸಿದ ತಂಗಾಳಿಗೆ ಒಮ್ಮೆ ನವಿರಾಗಿ ಓಲಾಡಿ ದೃಢವಾಗಿ ನಿಂತಿತು. ಈಚಲಗರಿ ತಂದ ಚಿಕ್ಕಣ್ಣ ಅದನ್ನು ಸಳ್ಳನೆ ಸೀಳಿ, ಗಿಡ ಹಾಗೂ ಕಂಬವನ್ನು ಸೇರಿಸಿ, ಜಡೆಯಂತೆ ಹೆಣೆದು ಬಿಗಿದ. ಗೆಳತಿಯರತ್ತ ತಿರುಗಿ ನಿಲ್ರೇ, ನಾನೂ ಬರ್ತೀನಿ, ನಿಲ್ರೇ ಎಂದು ಕೂಗಿದ ಲಲಿತಾ ಜಿಂಕೆಮರಿಯಂತೆ ಜಿಗಿಯುತ್ತಾ ಓಡೇಹೋದಳು. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248